STATEMENT

Showing the total number of employees working in various categories in the Bangalore Dairy the total No. of Scheduled Caste and Scheduled Tribes in various Cadres (Community-wise details)

Sl No.	Category of posts	No. of Employees in various Categories	No of employees belonging to SC/ ST Community		Remarks
			SC	ST	
1.	Class I	10	...	..	
2.	Class II	9	1	...	
3.	Class III	210	8	6	
4.	Class IV	290	30	22	
		519	39	28	

ಶ್ರೀ ಎಂ. ಬಿ. ರಾಮಸ್ವಾಮಿ.—ಮಾನ್ಯ ಮಂತ್ರಿಗಳು ನನ್ನ "ಇ" ಪ್ರಶ್ನೆಗೆ ಉತ್ತರವಾಗಿ "ಯಾರು ಇಲ್ಲ" ಎಂದು ಹೇಳಿದ್ದಾರೆ ಆದರೆ, ಒಬ್ಬ ಹರಿಜನ ನೌಕರರು ಉನ್ನತ ದರ್ಜೆಗೆ ಬಡ್ತಿ ನೀಡಲು ಅರ್ಹರಾಗಿದ್ದರೂ, ಅವರಿಗೆ ಸರಿಯಾದ ಬಡ್ತಿ ಇಲ್ಲದೆ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಎನ್. ಚಿಕ್ಕೇಗೌಡ.— ಆ ರೀತಿಯಾಗಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಮಾನ್ಯ ಮಂತ್ರಿಗಳು, ನೀಡಿರುವ ಪಟ್ಟಿಯಲ್ಲಿ ಕ್ಲಾಸ್ ಳರಲ್ಲಿ ಸುಮಾರು ೩೦ ಜನರಿಗೆ ಮತ್ತು ಕ್ಲಾಸ್ ೩ರಲ್ಲಿ ೮ಜನ ಹರಿಜನರಿಗೆ ಕೊಡಬಾಗಿದೆ ಎಂದು ಗೊತ್ತಾಗುತ್ತದೆ. ಇದಕ್ಕೆ ಕಾರಣ, ಸಕಾಲದಲ್ಲಿ ಅರ್ಜಿ ಬರಲಿಲ್ಲ ಎನ್ನುವುದೇ ಅಥವಾ ಅರ್ಜಿಗಳು ಬಾದರೂ ಅವರಿಗೆ ಪ್ರಾತಿನಿಧ್ಯ ಕೊಡಲಿಲ್ಲ ಎನ್ನುವುದೇ ?

ಶ್ರೀ ಎನ್. ಚಿಕ್ಕೇಗೌಡ.—ಸಾಮಾನ್ಯವಾಗಿ ಹಿಂದೆ ಹಿಂದುಳಿದವರಲ್ಲಿ ಮತ್ತು ಹರಿಜನ ಗಿರಿಜನರಲ್ಲಿ ಹೆಚ್ಚಿನ ಹುದ್ದೆಗಳಿಗೆ ಬರತಕ್ಕ ವಿದ್ಯಾವಂತರಿರಲಿಲ್ಲ. ಈ ಉದ್ದಮೆ ಕಳೆದ ೭-೮ ವರ್ಷಗಳ ಹಿಂದೆಯೇ ಸ್ಥಾಪನೆಯಾಗಿರುವುದಾಗಿದೆ. ಆದುದರಿಂದ, ಆ ಕಾಲದಲ್ಲಿ ಅರ್ಹಾ ಅರ್ಜಿಗಳು ಬಂದಿರಲಿಲ್ಲ ಎನ್ನುವುದು ನನ್ನ ಭಾವನೆ,

ಶ್ರೀ ಎಂ. ಬಿ. ರಾಮಸ್ವಾಮಿ.—ಮಾನ್ಯ ಮಂತ್ರಿಗಳು ನನ್ನ "ಇ" ಪ್ರಶ್ನೆಗೆ ಉತ್ತರ ನೀಡುತ್ತಾ "ಯಾರು ಇಲ್ಲ" ಎನ್ನುವ ಮಾತನ್ನು ಹೇಳಿದ್ದಾರೆ. ಯಾರಿಗೆ ಅನ್ಯಾಯವಾಗಿದೆ ಮತ್ತು ಯಾರಿಗೆ ಅನಾನುಕೂಲವಾಗಿದೆ ಎನ್ನುವುದನ್ನು ನಾವು ನಿರ್ದಿಷ್ಟವಾಗಿ ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೆ. ಅವರು ಅವನ್ನು ಸರಿಪಡಿಸುವರೆ ?

SRI N. CHIKKE GOWDA.—Certainly I will look into the matter.

ಶಿರಹಟ್ಟಿ ತಾಲೂಕಿನಲ್ಲಿ ಅಭಾವ ಪರಿಸ್ಥಿತಿಯಿಂದಾಗಿ ಜನರು ವಲಸೆ ಹೋಗಿರುವುದು

೩೪೯ ಶ್ರೀ ವಿ. ವಿ. ವಾಯಿ (ಶಿರಹಟ್ಟಿ).—ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಶಿರಹಟ್ಟಿ ತಾಲ್ಲೂಕಿನಲ್ಲಿ ೧೯೬೧ರಿಂದ ೧೯೬೩ರ ವರೆಗೆ ತೀವ್ರ ಬರಗಾಲ, ಅಭಾವ ಪೀಡಿತ ಪ್ರದೇಶವಾಗಿದ್ದು ತಾಲ್ಲೂಕಿಂದ ವಲಸೆ ಹೋದ ಜನ ಸಂಖ್ಯೆ ಎಷ್ಟು ;

†Indicates that remarks or Speehes have not been revised by the the member Concerned

(ಅ) ಶಿರಹಟ್ಟಿಗೆ ಹೊಂದಿದ ತಾಲ್ಲೂಕಿನ ಮುಂಡರಗಿಯನ್ನು ಬರಗಾಲ ಪ್ರದೇಶವೆಂದು ಸಾರಿ ಅನೇಕ ಬರಗಾಲ ಪರಿಹಾರ ಕಾಮಗಾರಿ ಕೈಕೊಳ್ಳಲಾಗಿದೆ ಆದರಷ್ಟೇ ಕಂಗಾಲಾದ ಪ್ರದೇಶಕ್ಕೆ ಪರಿಹಾರ ಒದಗಿಸದಿರುವುದಕ್ಕೆ ಕಾರಣಗಳೇನು ;

(ಇ) ೧೯೭೫–೭೬ರಲ್ಲಿ ವಿಪರೀತ ಮಳೆಯಿಂದಾಗಿ ಬೆಳೆ ದನಗಳು ಅನ್ನ ನಿರ್ಗತಿಕರಾಗಿದ್ದು, ಸರ್ಕಾರಕ್ಕೆ ವಿದಿತವಿದೆಯೇ ;

(ಈ) ಹಾಗಿದ್ದಲ್ಲಿ ತಗಾವಿ ಸಾಲ, ಸಹಕಾರಿ ಸಂಘದ ಸಾಲ, ಅನೇಕ ವರ್ಷಗಳಿಂದ ಹಪ್ತೆ ಬಾಕಿ ವಸೂಲಿ ಕಡ್ಡಾಯ ಮಾಡಲಾಗುತ್ತಿದೆ ಎಂಬುದು ಸರ್ಕಾರ ಅರಿತಿದೆಯೇ ;

(ಉ) ಈ ತಾಲ್ಲೂಕಿಗೆ ಬರಗಾಲ ಪರಿಹಾರ ಕಾಮಗಾರಿಗೆಂದು ಕನಿಷ್ಟ ಎರಡು ಲಕ್ಷ ರೂಪಾಯಿ ಗಳನ್ನು ಮಂಜೂರು ಮಾಡಲು ಸರಕಾರ ಉದ್ದೇಶಿಸಿದೆಯೇ ;

(ಊ) ಬರಗಾಲವೆಂದು ಸಾರಿ ಅದಕ್ಕನುಗುಣವಾಗಿ ಕಾಮಗಾರಿಗಳನ್ನು ಪ್ರಾರಂಭಿಸುವುದರ ಬಗ್ಗೆ ಸರಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕಂದಾಯ ಮಂತ್ರಿಗಳು).—

(ಅ) ಯಾರೂ ವಲಸೆ ಹೋಗುವುದಿಲ್ಲ.

(ಆ) ಮುಂಡರಗಿ ತಾಲ್ಲೂಕು ಕ್ಷಾಮ ಪೀಡಿತ ತಾಲ್ಲೂಕು ಎಂದು ಪರಿಗಣಿಸಿದ್ದಕ್ಕಾಗಿ ಡಿ. ಪಿ. ಎ. ಪಿ. ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ,

(ಇ) ಕರ್ನಾಟಕದ ಕೆಲವು ಭಾಗದಲ್ಲಿ ಹೆಚ್ಚು ಮಳೆಯಾಗಿ ಮುಂಗಾರು ಬೆಳೆ ನಾಶವಾದ ವಿಷಯು ಸರ್ಕಾರದ ಗಮನಕ್ಕೆ ಬಂದಿದೆ.

(ಈ) ಕಡ್ಡಾಯವಾಗಿ ಸರಕಾರಿ ಸಾಲ ಮತ್ತು ಬಾಕಿ ವಸೂಲಿ ಮಾಡುತ್ತಿಲ್ಲವೆಂದು ಸರಕಾರದ ಗಮನಕ್ಕೆ ಬಂದಿದೆ.

(ಉ) ಶಿರಹಟ್ಟಿ ತಾಲ್ಲೂಕಿನ ೩೮ ಹಳ್ಳಿಗಳ ಮುಂಗಾರು ಬೆಳೆ ಕಿಟ್ಟಿನೆ ಎಂದು ಮತ್ತು ಪರಿಸ್ಥಿತಿ ಅಷ್ಟು ಹದಗೆಟ್ಟಿಲ್ಲವೆಂದು ತಿಳಿದಿದೆ. ಆದರೂ ಸಹ ಮಂಜೂರಾದ ಲೋಕೋಪಯೋಗಿ ಭೂಸಾರ ಸಂರಕ್ಷಣೆ, ಅರಣ್ಯಾಭಿವೃದ್ಧಿ ಕಾಮಗಾರಿ ಕೆಲಸಗಳು ತೆಗೆದು ಕೊಳ್ಳಲು ಆದೇಶ ನೀಡಲಾಗಿದೆ.

(ಊ) ಪ್ರಶ್ನೆಯಿಲ್ಲ.

ಶ್ರೀ ವಿ. ವಿ. ವಾಯಿ.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ, ''ಶಿರಹಟ್ಟಿ ತಾಲ್ಲೂಕಿನಿಂದ ಯಾರೂ ವಲಸೆ ಹೋಗಿರುವುದಿಲ್ಲ'' ಎಂದು ಹೇಳಿದ್ದಾರೆ ಇದರ ಬಗ್ಗೆ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳು ತಪ್ಪು ವರದಿಯನ್ನು ಕೊಟ್ಟಿದ್ದಾರೆ ಎಂದು ನಾನು ಹೇಳುತ್ತೇನೆ. ಮುಂಡರಗಿ ತಾಲ್ಲೂಕನ್ನು ಕಳೆದ ೧೬ ವರ್ಷಗಳಿಂದ ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿದ್ದಾರೆ. ಅದೇ ರೀತಿ ಶಿರಹಟ್ಟಿ ತಾಲ್ಲೂಕು ಕೂಡ ಅಷ್ಟೇ ಬರಗಾಲಕ್ಕೆ ತುತ್ತಾಗಿದೆ ಆದುದರಿಂದ, ಶಿರಹಟ್ಟಿ ತಾಲ್ಲೂಕನ್ನೂ ''ಬರಗಾಲ ಪೀಡಿತ ಪ್ರದೇಶ'' ವೆಂದು ಸಾರಿ, ಅಲ್ಲಿ ಕಾಮಗಾರಿಗಳನ್ನು ಸರ್ಕಾರದವರು ಪ್ರಾರಂಭ ಮಾಡಬೇಕೆಂದು ಹೇಳಬಯಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ಬಂದಿರುವ ವರದಿ ಪ್ರಕಾರ, ಶಿರಹಟ್ಟಿ ತಾಲ್ಲೂಕಿನಲ್ಲಿ ಕಂದಾಯವನ್ನು ಮಾಫಿ ಮಾಡತಕ್ಕ ಸ್ಥಿತಿ ಯಾಗಲೀ, ಮತ್ತು ಅಭಾವಪೀಡಿತ ಪ್ರದೇಶವೆಂದು ಪರಿಗಣಿಸುವುದಕ್ಕಾಗಲೀ ಅವಕಾಶವಿಲ್ಲದ ರೀತಿಯಲ್ಲಿ ವರದಿ ಬಂದಿದೆ. ಆದುದರಿಂದ, ಮುಂಡರಗಿ ತಾಲ್ಲೂಕಿನಲ್ಲಿ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ, ಅವುಗಳನ್ನು ಇಲ್ಲಿ ಕೂಡ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲವೆನ್ನುವ ಮಾತನ್ನು ನಾನು ಬಹಳ ನೊಂದ ಹೃದಯದಿಂದ ಮಾನ್ಯ ಸದಸ್ಯರಾದ ಶ್ರೀ ವಾಯಿ ಅವರಿಗೆ ತಿಳಿಸಬೇಕಾಗಿದೆ.

ಶ್ರೀ ವಿ. ವಿ. ವಾಯಿ.—ಮಾನ್ಯ ಮಂತ್ರಿಗಳು ನನ್ನ ''ಈ'' ಪ್ರಶ್ನೆಗೆ ಉತ್ತರವಾಗಿ ''ಕಡ್ಡಾಯ ವಾಗಿ ಸರ್ಕಾರ ಸಾಲದ ಬಾಕಿಯನ್ನು ವಸೂಲ್ಮಾಡುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ'' ಎಂದು ಹೇಳಿದ್ದಾರೆ. ನಾನು ಈ ಪ್ರಶ್ನೆ ಹಾಕುವ ಸಂದರ್ಭದಲ್ಲಿ ಸಾಲದ ಬಾಕಿಯನ್ನು ವಸೂಲ್ಮಾಡುತ್ತಿದ್ದರು

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಪ್ರದೇಶ ಅಭಾವಪೀಡಿತ ಪ್ರದೇಶವಲ್ಲದಿದ್ದರೂ, ಹಳೇ ಬಾಕಿಯನ್ನು ಒಂದೇ ಸಾರಿ ವಸೂಲ್ಮಾಡಬಾರದೆಂದೂ, ಸ ಲ್ಪ ನಿಧಾನವಾಗಿ ವಸೂಲಿ ಕ್ರಮ ತೆಗೆದ ಕೊಳ್ಳಬೇಕೆಂದೂ ನಾವು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇವೆ.

ಶ್ರೀ ವಿ. ವಿ ವಾಯಿ.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ನೀಡುತ್ತಾ, ''೩೮ ಹಳ್ಳಿಗಳ ಮುಂಗಾರು ಬೆಳೆ ಕೆಟ್ಟಪೆ ಎಂದು ತಿಳಿಸಿದ್ದಾರೆ. ಆದರೆ, ಅಲ್ಲಿ ೫೧ ಹಳ್ಳಿಗಳ ಪರಿಸ್ಥಿತಿ ಚೆನ್ನಾಗಿಲ್ಲ. ಆದಂದರಿಂದ, ಅಲ್ಲಿನ ರೈತರಿಗೆ ಹೆಚ್ಚಿನ ಸಹಾಯಧನ ವಗೈರೆ ಕೊಟ್ಟು, ಅಲ್ಲಿ ಸೂಕ್ತ ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈಗ ಅಲ್ಲಿ ರಾಬಿ ಬೆಳೆ ಬರುತ್ತಿದೆ. ನಾನು ಮತ್ತೆ ಅಧಿಕಾರಿಗಳಿಗೆ ಅಲ್ಲಿನ ಪರಿಸ್ಥಿತಿ ಹೇಗಿದೆ ಎಂಬುದನ್ನು ವರದಿ ಮಾಡಲು ತಿಳಿಸಿ, ಅವಶ್ಯವಿದ್ದರೆ, ಏನೇನು ವಿನಾಯಿತಿಗಳನ್ನು ಕೊಡಬೇಕಾಗಿದೆ, ಅವುಗಳನ್ನು ಕಾನೂನು ಪ್ರಕಾರ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಸೊಕ್ಕೆ ಗ್ರಾಮದಲ್ಲಿ ಅಕ್ರಮವಾಗಿ ಮನೆಗಳನ್ನು ನಿರ್ಮಿಸಿರುವುದು

೭೯೬ ಶ್ರೀ ಹಂಜಿ ಶಿವಣ್ಣ (ತರೀಕೆರೆ).—ಶಿಕ್ಷಣ ಮಂತ್ರಿಗಳು ಈ ವಿಷಯಗಳು ದಯೆಯಿಟ್ಟು ತಿಳಿಸುವರೆ:—

(ಅ) ತರೀಕೆರೆ ತಾಲೂಕು, ಅಜ್ಜಂಪುರ ಹೋಬಳಿ, ಸೊಕ್ಕೆಗ್ರಾಮದ ಸ್ಕೂಲು ಜಾಗದಲ್ಲಿ ಬಗರೆ ಹುಕುಂನಿಂದ ಮನೆಗಳನ್ನು ಕಟ್ಟಿಸಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ;

(ಆ) ಈ ಸ್ಥಳಕ್ಕೆ ಮಂತ್ರಿಗಳು ಭೇಟಿಕೊಟ್ಟು ಸ್ಥಳ ಪರಿಶೀಲನೆ ಮಾಡಿರುವುದು ನಿಜವಲ್ಲವೆ ;

(ಇ) ಹಾಗಿದ್ದರೆ, ಇದುವರೆವಿಗೂ ಈ ಜಾಗವನ್ನು ಖಾಲಿ ಮಾಡದಿರುವುದಕ್ಕೆ ಕಾರಣಗಳೇನು;

(ಈ) ಈ ಸ್ಕೂಲಿನಲ್ಲಿ ಸ್ಥಳದ ಅಭಾವದಿಂದ ಮಕ್ಕಳಿಗೆ ಬಹಳ ತೊಂದರೆಯಾಗಿರುವುದು ನಿಜವಲ್ಲವೆ ;

(ಉ) ಈ ಊರಿನ ಜನರು ಈ ಶಾಲೆಗಳಿಗೆ ಎರಡು ಕೊಠಡಿಗಳನ್ನು ದಾನ ರೂಪವಾಗಿ ಕಟ್ಟಲು ಮುಂದೆ ಬಂದಿರುವುದು ನಿಜವಲ್ಲವೆ ;

(ಊ) ಈ ಒತ್ತುವರಿ ಜಾಗವನ್ನು ಖಾಲಿ ಮಾಡದಿದ್ದುರಿಂದ ಈ ಊರಿನ ಜನರು ಕೊಠಡಿಗಳನ್ನು ಕಟ್ಟಲು ಕೈ ಬಿಟ್ಟಿರುವುದು ನಿಜವಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಶಿಕ್ಷಣ ಮಂತ್ರಿಗಳು).—

(ಅ) ಬಂದಿದೆ.

(ಆ) ನಿಜ.

(ಇ) ಈ ಮನೆಗಳನ್ನು ಕಿತ್ತು ಹಾಕಲು ನಮ್ಮ ಇಲಾಖೆಯಂದರಿಂದ ಸಂಬಂಧಪಟ್ಟ ರೆವಿನ್ಯೂ ಮತ್ತು ಪೋಲೀಸ್ ಇಲಾಖೆಗಳನ್ನು ಜಿಲ್ಲಾಧಿಕಾರಿಗಳವರ ಮುಂಖಾಂತರ ಕೇಳಿ ಕೊಳ್ಳಲಾಗಿದೆ.

(ಈ) ನಿಜ.

(ಉ) ನಿಜ.

(ಊ) ನಿಜ.

ಶ್ರೀ ಹಂಜಿ ಶಿವಣ್ಣ.—ಮಾನ್ಯ ಮಂತ್ರಿಗಳು ನನ್ನ ಎಲ್ಲಾ ಪ್ರಶ್ನೆಗಳಿಗೂ ಉತ್ತರವಾಗಿ ''ನಿಜ'' ಎಂದು ಒಪ್ಪಿಕೊಂಡಿದ್ದಾರೆ. ಶಾಲೆಗೆ ಸಂಬಂಧಪಟ್ಟ ಜಾಗವನ್ನು ಕೆಲವರು ಅಲ್ಲಿ ೧೫ ವರ್ಷಗಳಿಂದಲೂ ಶಮ್ಮ ವಶದಲ್ಲಿಟ್ಟು ಕೊಂಡಿದ್ದಾರೆ ಇದನ್ನು ಮಾನ್ಯ ಮಂತ್ರಿಗಳೂ ಕೂಡ ಭೇಟಿ ಕೊಟ್ಟು ನೋಡಿ ಕೊಂಡು ಬಂದಿದ್ದಾರೆ. ಆದರೆ, ಇವುಗಳನ್ನು ಇನ್ನೂ ಖಾಲಿ ಮಾಡದೇ ಇರುವುದಕ್ಕೆ ಕಾರಣವೇನು?